ದಿನಾಂಕ 07-09-2023 ರಂದು ಸಾಕ್ಷಿಯನ್ನು ಕರೆಸಿ ವಿಧಿಬದ್ಧವಾದ ಪ್ರಮಾಣವಚನ ಭೋಧಿಸಲಾಯಿತು.

<u>ಪಾಟೀ ಸವಾಲುಃ 6 ನೇ ಪ್ರತಿವಾದಿ ಪರ ಶ್ರೀ. ಪಿ.ಕೆ.ಎಸ್ ವಕೀಲರಿಂದಃ</u>

1. 6 ನೇ ಪ್ರತಿವಾದಿಗೆ ಸೇರಿದ ಆಸ್ತಿ ದಾವಾ 3 ನೇ ಅನುಸೂಚಿ ಸ್ವತ್ತಿನ ಉತ್ತರಕ್ಕೆ ಇದೆ ಎಂದರೆ ಸರಿ. ಸರ್ವೇ ನಂ. 104/4 ಮತ್ತು ಸರ್ವೇ ನಂ. 104/5 ಇವುಗಳ ಮಧ್ಯೆ ಸುಮಾರು 60 ವರ್ಷದ ಹಳೆಯದಾದ ಅಗಳು ಇದೆ ಎಂದರೆ ಇಲ್ಲ. ಸರ್ವೇ ನಂ. 104/4 ಮತ್ತು ಸರ್ವೇ ನಂ. 104/5 ರ ಮಧ್ಯದಲ್ಲಿ ಏನು ಇದೆ ಎಂದರೆ ಸಾಕ್ಷಿ 1993 ರಲ್ಲಿ ಸ್ವಲ್ಪ ಅಗಳು ಹಾಕಿರುತ್ತಾರೆ, ಆ ಸಂದರ್ಭದಲ್ಲಿ ಪೊಲೀಸ್ ದೂರು ನೀಡಿದ ಕಾರಣ ಹಾಗೇ ಉಳಿದಿರುತ್ತದೆ ಎಂದು ಹೇಳುತ್ತಾರೆ. ನಾನು ಮೇಲೆ ಹೇಳಿದ ಅಗಳು ಸರ್ವೇ ನಂ. 104/5 ರ ಉತ್ತರ ದಿಕ್ಕಿನಲ್ಲಿ ಆ ರೀತಿ ಅಗಳು ಹಾಕಿದ್ದಾರೆ ಎಂದರೆ ಸಾಕ್ಷಿ ಸರ್ವೇ ನಂ. 104/4 ರ ಮಾಲಿಕರು 10 ಸೆಂಟ್ಸ್ ಜಾಗವನ್ನು ಆಕ್ರಮಣ ಮಾಡಿ ದಕ್ಷಿಣ ಭಾಗದಲ್ಲಿ ಅಗಳು ಹಾಕಿದ್ದಾರೆ ಎಂದು ಹೇಳುತ್ತಾರೆ. ನಾನು ಸರ್ವೇ ನಂ. 104/5 ರ ಪೈಕಿ 1.39 ಎಕರೆ ಸ್ವಾದೀನವನ್ನು ಹೊಂದಿದ್ದೇನೆ. ಅಕ್ರಮವಾಗಿ 10 ಸೆಂಟ್ಸ್ ಜಾಗವನ್ನು ಪ್ರತಿವಾದಿ ಸ್ವಾದೀನಹೊಂದು ಬರುತ್ತಿದ್ದರೋ ಇಲ್ಲವೋ ಎಂದರೆ ಸಾಕ್ಷಿ ಸ್ವತ್ತನ್ನು ಸರ್ವೇ ಮಾಡಿಸಲು ನನಗೆ ಸಾಧ್ಯವಾಗುವುದಿಲ್ಲ ಏಕೆಂದರೆ ನನ್ನ ಹೆಸರಿನಲ್ಲಿ ಪಹಣಿ ಪತ್ರಿಕೆ ಇರುವುದಿಲ್ಲ ಅದನ್ನು ಉಪಯೋಗಿಸಿಕೊಂಡು 6 ನೇ ಪ್ರತಿವಾದಿ 10 ಸೆಂಟ್ಸ್ ಜಾಗದ ಸ್ವಾದೀನವನ್ನು ಹೊಂದುತ್ತಾ ಬಂದಿದ್ದಾರೆ ಎಂದು ಹೇಳುತ್ತಾರೆ.

2. ನಮ್ಮ ಮತ್ತು 6 ನೇ ಪ್ರತಿವಾದಿಯ ಸ್ಥಳ ಸರ್ವೇ ನಂ. 104/4 ಮತ್ತು ಸರ್ವೇ ನಂ. 104/5 ಕ್ಕೆ ಸರ್ವೇಯರ್ ಬಂದು ಅಳತೆ ಮಾಡಿ ಗಡಿ ತಕರಾರವನ್ನು ಇತ್ಯರ್ಥ ಮಾಡಿದ್ದಾರೆ ಎಂದರೆ ಸರಿಯಲ್ಲ. ಆ ರೀತಿ ಅಳತೆ ದಿಃ 2.7.2020 ಕ್ಕೆ ನನಗೆ ನೋಟೀಸ್ ಕೊಟ್ಟು ಅಳತೆಯಾಗಿದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ನನಗೆ ನೋಟೀಸನ್ನು ಕೊಟ್ಟಿರುವುದಿಲ್ಲ ಅಳತೆಯನ್ನು ಸಹ ಮಾಡಿರುವುದಿಲ್ಲ ಎಂದು ಹೇಳುತ್ತಾರೆ. 6 ನೇ ಪ್ರತಿವಾದಿ ಸ್ವಾದೀನ ಹೊಂದಿರುವ 10 ಸೆಂಟ್ಸ್ ಜಾಗವನ್ನು ಬಿಟ್ಟುಕೊಡಬೇಕೆಂದು ನಾನು ಈ ದಾವೆಯಲ್ಲಿ ಪರಿಹಾರ ಕೇಳಿದ್ದೇನೆ. ಅಕ್ರಮ ಮಾಡಿದ 10 ಸೆಂಟ್ಸ್ ಜಾಗದಲ್ಲಿ ಕೃಷಿ ಇದೆಯಾ ಎಂದರೆ ಇರಬಹುದು. 2020 ನೇ ಇಸವಿಯಲ್ಲಿ ಸ್ಥಳ ಅಳತೆಯಾದ ನಂತರ 10 ಸೆಂಟ್ಸ್ ಜಾಗವನ್ನು 6 ನೇ ಪ್ರತಿವಾದಿ ಸ್ವಾದೀನ ಹೊಂದಿದ್ದಾರೆ ಎಂಬುದಕ್ಕೆ ನಕ್ಷೆ ಅಥವಾ ಸರ್ವೇ ದಾಖಲೆಯನ್ನು ಕೇಳಿದ್ದೀರಾ ಎಂದರೆ ಸಾಕ್ಷಿ ಸರ್ವೇಯವರ ಹತ್ತಿರ ಕೇಳಿರುವುದಿಲ್ಲ ಆದರೆ ಪೊಲೀಸರಿಗೆ ದೂರು ನೀಡಿದ್ದೇನೆ ಎಂದು ಹೇಳುತ್ತಾರೆ.

3. ಭವಾನಿ ಬಿನ್ ಪದ್ಮಯ್ಯ ಪೂಜಾರಿ, ನನ್ನ ತಂಗಿ. ದಾವೆಯಲ್ಲಿ ನನ್ನ ಪ್ರತಿಪಾದನೆ ಏನೆಂದರೆ ಪುಟ್ಟಮ್ಮ ರವರು ಪದ್ಮಯ್ಯ ಪೂಜಾರಿಯವರಿಗೆ ವಿಲ್ಲುನಾಮೆಯನ್ನು ಬರೆದಿದ್ದಾರೆ ಅದರ ಪ್ರಕಾರ ನನಗೆ ಹಕ್ಕು ಬರಬೇಕೆಂದು ಪ್ರತಿಪಾದನೆ ಮಾಡುತ್ತಿದ್ದೇನೆ ಎಂದರೆ ಸರಿ. ಆ ವಿಲ್ಲುನಾವೆಯ ಆಧಾರದ ಮೇಲೆ 1993 ರಲ್ಲಿ ಪಹಣಿ ಷತ್ರಿಕೆಯನ್ನು ಬದಲಾವಣೆ ಮಾಡಬೇಕೆಂದು ತಹಶೀಲ್ದಾರವರಿಗೆ ಅರ್ಜಿ ಕೊಟ್ಟಿದ್ದೇನೆ ಎಂದರೆ ಸರಿ. ತನಿಖೆಯಾದ ನಂತರ ಕಂದಾಯ ನಿರೀಕ್ಷಕರು ವಿಲ್ಲುನಾಮೆಯು ಕ್ರಮಬದ್ಧವಾಗಿಲ್ಲ ಎಂದು ಪಹಣಿ ಷತ್ರಿಕೆ ಮಾಡದೆ ಹಿಂಬರಹವನ್ನು ನಿಪಿ10 ರಂತೆ ಕೊಟ್ಟಿದ್ದಾರೆ ಎಂದರೆ ಸರಿ. ನಿಪಿ10 ರ ವಿರುದ್ಧ ಸಹಾಯಕ ಕಮಿಷನರ್ ರವರ ನ್ಯಾಯಾಲಯದಲ್ಲಿ ಅಪೀಲು ಮಾಡಿರುವುದಿಲ್ಲ ಆದರೆ ನಿರಂತರವಾಗಿ ನನ್ನ ಹೆಸರಿಗೆ ಪಹಣಿ ಷತ್ರಿಕೆ ಮಾಡಿಕೊಡುವಂತೆ ತಹಶೀಲ್ದಾರವರಿಗೆ ಅರ್ಜಿಯನ್ನು ಬರೆಯುತ್ತಿದ್ದೇನೆ. ತಹಶೀಲ್ದಾರವರಿಗೆ ಅರ್ಜಿ ಕೊಟ್ಟ ನಂತರವು ಸಹ ನನ್ನ ಹೆಸರಿಗೆ ಪಹಣಿ ಷತ್ರಿಕೆ ಆಗಿರುವುದಿಲ್ಲ. ಆ ಹಿಂಬರದ ಆಧಾರದ ಮೇಲೆ ವಿಲ್ಲುನಾಮೆ ಮೂಲಕ ನನಗೆ ಹಕ್ಕು ಬಂದಿದೆ ಎಂದು ಆ ಹಕ್ಕನ್ನು ಘೋಷಣೆ ಮಾಡಬೇಕೆಂದು ನಾನು ಈ ನ್ಯಾಯಾಲಯದಲ್ಲಿ ದಾವೆ ಸಲ್ಲಿಸಿರುವುದಿಲ್ಲ, ಸಾಕ್ಷಿ ಮುಂದುವರಿದು ತಂದೆಯವರು ಮಾಡಿದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ನನ್ನ ತಂದೆಯವರ ಜೀವಿತ ಕಾಲದಲ್ಲಿ ವಿಲ್ಲುವನಾವೆಯ ಆಧಾರದ ಮೇಲರೆ ಅವರ ಹೆಸರಿಗೆ ಪಹಣಿ ಷತ್ರಿಕೆ ಆಗಿರುವುದಿಲ್ಲ. ದಾವಾ ಸ್ವತ್ತಿನಲ್ಲಿ ನಾನೇ ವಾಸ್ತವ್ಯದಲ್ಲಿದ್ದೇನೆ. ಅದಕ್ಕೆ ಪೂರಕವಾಗಿ ಆಧಾರ್ ಕಾರ್ಡ್ ಮತ್ತು ರೇಶನ್ ಕಾರ್ಡ್ ಗಳು ಇರುತ್ತವೆ.

4. ನನಗೂ ಮತ್ತು 6 ನೇ ಪ್ರತಿವಾದಿ ಮತ್ತು ಅವರ ಸಹೋದರರ ನಡುವೆ ಯಾವುದೇ ವೈಷಮ್ಯ ಇರುವುದಿಲ್ಲ. ಏನಾದರೂ ಇದ್ದರೇ ಪೇಪರ್ ನಲ್ಲಿ ಮಾತ್ರ ಎಂದು ಹೇಳುತ್ತಾರೆ ದಿಃ 20.5.2021 ರಂದು ನನ್ನ ತಂಗಿಯ ಹೆಸರಿನಲ್ಲಿ 6 ನೇ ಪ್ರತಿವಾದಿಯ ವಿರುದ್ಧ ಒಂದು ದೂರನ್ನು ನೀಡಿದ್ದೇನೆ. 1993 ರಲ್ಲಿ 6 ನೇ ಪ್ರತಿವಾದಿ ಆಸ್ತಿಯನ್ನು ಅಕ್ರಮ ಮಾಡಿದ್ದಾಗ ನನ್ನ ತಂದೆಯವರು ದೂರು ನೀಡಿದ್ದಾರೆ. 1993 ರ ನಂತರವು ಸಹ 6 ನೇ ಪ್ರತಿವಾದಿ ಅತಿಕ್ರಮಣವನ್ನು ಮಾಡುತ್ತಿದ್ದಾರೆ ಆದರೆ ನಾವು ಅದನ್ನು ಗಂಭೀರವಾಗಿ ತೆಗೆದುಕೊಂಡಿರುವುದಿಲ್ಲ. 1993 ರ ನಂತರ 6 ನೇ ಪ್ರತಿವಾದಿ ಹೆಚ್ಚುವರಿಯಾಗಿ ಅತಿಕ್ರಮಣ ಮಾಡಲು ಪ್ರಯತ್ನ ಮಾಡಿದ್ದೀರಾ ಎಂದರೆ ಸಾಕ್ಷಿ 2021 ರಲ್ಲಿ ಪ್ರತಿವಾದಿ ಬೇಲಿಯನ್ನು ತೆಗೆದು ಅತಿಕ್ರಮಣ ಪ್ರವೇಶ ಮಾಡಲು ಪ್ರಯತ್ನ ಮಾಡಿದಾಗ ದೂರನ್ನು ನೀಡಿದ್ದೇವೆ ಎಂದು ಹೇಳುತ್ತಾರೆ. ಸಾಕ್ಷಿಗೆ ಒಂದು ಫೋಟೋವನ್ನು ತೋರಿಸಿ ದಾವಾ ಸ್ವತ್ತು ಮತ್ತು ಪ್ರತಿವಾದಿಯ ಸ್ವತ್ತು ನಡುವೆ ಅಗಳು ಇದೆಯೇ ಎಂದು ಕೇಳಲಾಗಿ ಸಾಕ್ಷಿ ಅದನ್ನು ನೋಡಿ ಆ ಅಗಳನ್ನು ಈಗ ಮಾಡಿದ್ದಾರೆ ಎಂದು ಗುರುತಿಸಿದ ಮೇರೆಗೆ ಸದರಿ ಫೋಟೋವನ್ನು ನಿಡಿ1 ಎಂದು ಗುರುತಿಸಲಾಯಿತು. ನಿಡಿ1 ರಲ್ಲಿ ಅಡಿಕೆ ಗಿಡಗಳು ಕಾಣುವ ಮೇಲ್ಬದಿಯ ಜಾಗ 6 ನೇ

ಪ್ರತಿವಾದಿಯರದ್ದು, ಕೆಳ ಬದಿಯಲ್ಲಿರುವ ಜಾಗ ನಿಮಗೆ ಸೇರಿದ್ದು ಎಂದು ಕೇಳಲಾಗಿ ಅದರಲ್ಲಿ 10 ಸೆಂಟ್ಸ್ ಜಾಗವನ್ನು 6 ನೇ ಪ್ರತಿವಾದಿ ಒಳಗೆ ಹಾಕಿದ್ದಾರೆ ಎಂದು ಹೇಳುತ್ತಾರೆ.

5. ಸರ್ವೇ ನಂ. 104/4 ನ್ನು 6 ನೇ ಪ್ರತಿವಾದಿ ಮತ್ತು ಅವರ ಸಹೋದರ ಮತ್ತು ಸಹೋದರಿಯರು ಅಳತೆ ಮಾಡಿಸಿ ಪಾಲು ಮಾಡಿಕೊಂಡಿದ್ದಾರೆ ಎಂದರೆ ಸಾಕ್ಷಿ ಅಳತೆಯ ನೋಟೀಸ್ ನನಗೆ ಸಿಕ್ಕಿರುವುದಿಲ್ಲ ಎಂದು ಹೇಳುತ್ತಾರೆ. 6 ನೇ ಪ್ರತಿವಾದಿ ಮತ್ತು ಅವರ ಅಣ್ಣ ಪ್ರತ್ಯೇಕವಾಗಿ ಅವರ ಜಾಗವನ್ನು ಸ್ವಾಧೀನಹೊಂದಿ ಅನುಭವಿಸಿಕೊಂಡು ಬರುತ್ತಿದ್ದಾರೆ ಎಂದರೆ ಸಾಕ್ಷಿ ಸರ್ವೇ ನಂ. 104/4 ರಲ್ಲಿ 80 ಸೆಂಟ್ಸ್ ಜಾಗ 6 ನೇ ಪ್ರತಿವಾದಿಗೆ ಸೇರಿದ್ದು ಎಂದು ಹೇಳುತ್ತಾರೆ. 6 ನೇ ಪ್ರತಿವಾದಿ ಮತ್ತು ಅವರ ಅಣ್ಣನ ಸ್ಥಳಗಳು ದಾವಾ ಸ್ವತ್ತಿಗಳಿಗಿಂತಲೂ 4 ಅಡಿ ಎತ್ತರದಲ್ಲಿರುವುದರಿಂದ ನಮ್ಮ ಸ್ವತ್ತನ್ನು ಅಕ್ರಮ ಮಾಡುವ ಪ್ರಶ್ನೆ ಬರುವುದಿಲ್ಲ ಎಂದರೆ ಸರಿಯಲ್ಲ. ಹಳೆಯದಾದ ಗದ್ದೆಯ ಗಟ್ಟಹುಣಿಗಳು ಸ್ವಾಭಾವಿಕ ಗಡಿಗಳಾಗಿರುತ್ತವೆ ಎಂದರೆ ಸಾಕ್ಷಿ ನಾನು ಗದ್ದೆಯ ಬಗ್ಗೆ ಯಾವುದೇ ದೂರು ಮಾಡಿರುವುದಿಲ್ಲ ಗದ್ದೆಯ ಮೇಲೆ ಇರುವ 1.39 ಎಕರೆಯಲ್ಲಿ ಅತಿಕ್ರಮಣ ಮಾಡಿದ್ದಾರೆ ಎಂದು ಹೇಳುತ್ತಾರೆ

(ಈ ಹಂತದಲ್ಲಿ 6 ನೇ ಪ್ರತಿವಾದಿ ಪರ ವಕೀಲರು ಪಾಟೀ ಸವಾಲಿಗೆ ಸಮಯಾವಕಾಶ ಕೋರಿರುವುದರಿಂದ ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

**(ಸಾ.ಓ.ಹೇ.ಕೇ.ಸ.ಇ.ಎ.ಒ)**

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ. ಬೆಳ್ತಂಗಡಿ